Reg No B G 155 11-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ತಂಜೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪ್ರತಿ ಮಗುವಿಗೂ ಸಂಸ್ಕೃತ ಕಲಿಸಬೇಕು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಆಹಾರಧಾನ್ಯ ವಶ

ಬೆಂಗಳೂರು— ಸಿ ಐ ಡಿ ಯವರು ಬೆಂಗಳೂರು, ಗುಲ್ಬರ್ಗ, ರಾಯಚೂರು ಮಂಗಳೂರು, ಶಿವಮೊಗ್ಗಾ, ಬೆಳಗಾಂ, ಧಾರ್ವಾಡಗಳಲ್ಲಿ ರೂ. 2.8 ಲಕ್ಷದಷ್ಟು ಡಿಕ್ಲೇರು ಮಾಡದ ಆಹಾರಧಾನ್ಯ ಘಟನೆಗಳನ್ನು ಪತ್ತೇ ಮಾಡಿರುವರು.

ಬೊಂಬಾಯಿ ಪರಿಸ್ಥಿತಿ

★

ಬೊಂಬಾಯಿ— ಶಿವಸೇನೆ ಗಡಿ ಚಳವಳಿಯಿಂದ ಉದ್ಭವಿಸಿದ ದಾಂಧಲೆಯು 3 ನೇ ದಿನವಾದ ನಿನ್ನೆಯೂ ಇತ್ತು — ಪರಿಸ್ಥಿತಿ ತಹಬಂದಿಗೆ ತರಲು ಅನಿವಾರ್ಯವಿದ್ದರಿಸನ್ಯ ಬರವಿಕೆಗೆ ಎಚ್ಚರಿಸಲಾಗಿತ್ತು — ದಾದರ್ ಭಾಗದಲ್ಲಿ ಪೋಲೀಸರು ಗುಂಡುಹಾರಿಸಿದರು ; ಇಬ್ಬರು ಸತ್ತು ಆರು ಮಂದಿ ಗಾಯಗೊಂಡರು — ಕೇರ್ತಿಕರ್ ಮಾರ್ಕ್ ಟ್ಟಿಗೆ ಬೆಂಕಿ ಹತ್ತಿಸುವ ಪ್ರಯತ್ನ ನಡೆದಿತ್ತು — ಅನೇಕ ಹೋಟಲುಗಳೂ ಮನೆಗಳೂ ಲೂಟಿ ಮಾಡಲ್ಪಟ್ಟವು — ಉತ್ತರ ಬೊಂಬಾಯಿನಲ್ಲಿ ಅನೇಕ ಖಾಸಗಿ ಕಾರುಗಳೂ ಕೆಲವು ಟ್ಯಾಕ್ಸಿಗಳೂ ಸುಡಲ್ಪಟ್ಟವು — ಸ್ಕೂಲು ಕಾಲೇಜುಗಳು ವಜಾಮಾಡಲ್ಪಟ್ಟವು — ಇಲ್ಲೀವರೆಗೆ 2000 ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರು - ಬೈಕಲಾಕ್ಕೆ ಹೋಗುತ್ತಿದ್ದ ಪೋಸ್ಟಲ್ ವ್ಯಾನ್ ಸುಡಲ್ಪಟ್ಟಿತು — ಉತ್ತರ ಬೊಂಬಾಯಿನಲ್ಲಿ ಹಲವು ಉಡುಪಿ ಹೋಟಲುಗಳು ಸುಡಲ್ಪಟ್ಟವು — ಕುರ್ಲಾ ಸ್ಟೇರ್ಷನ್ನಿನಲ್ಲಿ ಧಾಳಿ ನಡೆಸಲಾಯಿತು — ಹೈಕೋರ್ಟು ಮುಚ್ಚಲ್ಪಡದಿದ್ದರೂ ಜಡ್ಜರು ಕೋರ್ಟನ್ನು 1.30 ಕ್ಕೆ ನಿಲ್ಲಿಸಿದರು — ಎಲ್ಫಿನ್ಸ್ಟನ್ ಬ್ರಿಡ್ಜ್ ಹತ್ತಿರ ಪೋಲಿಸರು ಗುಂಡುಹಾರಿಸಿದ್ದರು — ಶಿವಾಜಿ ಪಾರ್ಕ್ ಮತ್ತು ಲೇಡಿ ಜಾಂಷೆಟ್ಜಿ ರಸ್ತೆಯಲ್ಲಿ ಅಂಗಡಿಗಳ ಲೂಟಿಯಾಗಿದೆ — ಪೋಸ್ಟು ಕಾರ್ಯಗಳಿಗೆ ಅಡಚಣೆಯಾಗಿ ನಿನ್ನೆ ಒಂದೇ ಸಾರಿ ಕಾಗದದ ಬಟವಾಡೆ ದಡಿಯೆತ್ತು.

ಲೋಹಿಯಾರ ವಿಗ್ರಹ

ರಾಮನಗರ— ಇಲ್ಲಿಗೆ ಹತ್ತಿರವಿರುವ ಹೆಂದಿಗುಂಡಿ ಅರಣ್ಯದ ಭಂಡೆಯಲ್ಲಿ ಡಾ॥ ರಾಂ ಮನೊಹರ ಲೋಹಿಯಾರ ವಿಗ್ರಹ ಕೆತ್ತಲು ನಿರ್ಧರಿಸಲಾಗಿದೆ.

ವಸ್ತುಪ್ರದರ್ಶನ

ತುಮಕೂರು— ಇಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಉದ್ಘಾಟಿಸುವ ವ್ಯವಸಾಯ ಮತ್ತು ಕೈಗಾರಿಕಾ ವಸ್ತುಪ್ರದರ್ಶನವು ತಾ॥ 24 ರವರೆಗೆ ತೆರೆದಿರುವುದು.

●

ಸೈಕಲ್ ರೇಸ್

ಬೆಂಗಳೂರು— ಅಂತರ ರೈಲ್ವೇ ಸೈಕಲ್ ಪಂಥಗಳು ಕಂಠೀರವ ಸ್ಟೇಡಿಯಂನಲ್ಲಿ ತಾ॥ 14 ರಿಂದ 16 ರವರೆಗೆ ನಡೆಯುವುದು — ಕಡೇ ದಿನ 150 ಕಿಲೋಮಿಟರು ರೋಡ್ ರೇಸ್ ನಡೆಯುವುದು.

★

ಜಾನ್ಸನ್ನರ ಆತ್ಮಚರಿತ್ರೆ

ನ್ಯೂಯಾರ್ಕು— ಜಾನ್ಸನ್ನರ ಆತ್ಮಚರಿತ್ರೆಯ ಹಕ್ಕಿಗೆ ಒಂದು ಅಮೇರಿಕಾ ಪ್ರಕಾಶನಾ ಸಂಸ್ಥೆಯು ರೂ. 1.125 ಕೋಟಿ ಕೊಡಲು ಮುಂದೆ ಬಂದಿದೆ — ಇನ್ನೂ ಬರೆಯಬೇಕು.

ಗರ್ಭಸ್ರಾವ

ಬೆಲ್ಗ್ರೇಡ್— ಯುಗೊಸ್ಲೋವಿಯದಲ್ಲಿ ಗರ್ಭಿಣಿಯರಿಗೆ ಗರ್ಭಸ್ರಾವ ನಡೆಸುತ್ತಿರುವದನ್ನು ನಿಲ್ಲಿಸಲು ಕ್ಯಾಥಲಿಕ್ ಚರ್ಚಿನ ಕೇಳಿಕೆಯನ್ನು ಸರಕಾರ ತಿರಸ್ಕರಿಸಿದೆ — ಯುಗೊಸ್ಲಾವಿಯಾದಲ್ಲಿ ಪ್ರತಿ ವರ್ಷ 3 ಲಕ್ಷ ಗರ್ಭಸ್ರಾವಗಳು ಆಸ್ಪತ್ರೆ ಮತ್ತು ಚಿಕಿತ್ಸಾ ಮಂದಿರಗಳಲ್ಲಿ ನಡೆಯುತ್ತಿದೆ — ಖಾಸಗಿಯಾಗಿ 3 ಲಕ್ಷದಷ್ಟು ನಡೆಯುತ್ತಿದೆ ಎಂದು ಹೇಳಲಾಗಿದೆ.

★

ಸಂಸ್ಕೃತದ ಮಹಿಮೆ

ತಿರುಪತಿ— ಪ್ರತಿ ಮಗುವಿಗೂ ಸಂಸ್ಕೃತ ಕಲಿಸಬೇಕೆಂದೂ, ಅದು ನಮ್ಮ ಸಾಂಸ್ಕೃತಿಕ ಜೀವಿತದಲ್ಲಿ ಪ್ರಮುಖ ಪಾತ್ರವಹಿಸಿದ್ದು ಮಾನವ ಅಭ್ಯುದಯಕ್ಕೆ ಕಾರಣವಾಗಿದೆಯೆಂದು ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಹೇಳಿದರು.

ಅಂಚೆದರ

ಮಧುರೈ— ಬರುವ ಆರ್ಥಿಕ ವರ್ಷದಲ್ಲಿ ಅಂಚೆದರ ಹೆಚ್ಚಿಸುವ ಸಂಭವವಿಲ್ಲವೆಂದು ಕೇಂದ್ರ ಮಂತ್ರಿ ಶ್ರೀ ರಾಂ ಸುಭ್ ಸಿಂಗ್ ಹೇಳಿದರು — ಕಳೆದ ಮೇ ತಿಂಗಳಿಂದ ಅಂಚೆದರ ಹೆಚ್ಚಿದ್ದರಿಂದ ಕಳೆದ ವರ್ಷದ ನಷ್ಟ ರೂ. 17 ಕೋಟಿ ತಪ್ಪಿಸಲು ಸಾಧ್ಯವಾಯಿತೆಂದೂ ಹೇಳಿದರು.

●

ಅತಿವೇಗದ ರೈಲು

ನವದೆಹಲಿ— ಜರ್ಮನಿ ಬಿಟ್ಟರೆ ಏಷ್ಯಾದಲ್ಲಿ ಅತಿ ವೇಗವಾಗುವ ರೈಲು ಕಳೆದ ವಾರ ಡೆಲ್ಲಿಯಿಂದ ಹೌರಾಕ್ಕೆ ಬಿಡಡಲಾಯಿತು — ಅದರಲ್ಲಿ ಪತ್ರಿಕೋದ್ಯೋಗಿಗಳ ತಂಡವಿತ್ತು — ಇದು ಗಂಟೆಗೆ 120 ಕಿಲೋ ಮೀಟರು ವೇಗದಲ್ಲಿ ಹೋಗುವುದು.

○

ರೂ. 2 ಕೋಟಿ ನಷ್ಟ

ಬೊಂಬಾಯಿ— ಗಲಭೆಯಿಂದ ಮುನಿಸಿಪಲ್ ಕಾರ್ಪೋರೇಷನ್ ಮತ್ತು ರೈಲುಗಳಿಗೆ ರೂ. 2 ಕೋಟಿ ಅಸ್ತಿಪಾಸ್ತಿ ನಷ್ಟವಾಗಿದೆ — ಮುನಿಸಿಪಲ್ ಸಿಟಿ ಬಸ್ಸು ಓಡಾಟ ನಿಂತಿದ್ದರಿಂದ ದಿನಕ್ಕೆ ರೂ 32 ಲಕ್ಷ ನಷ್ಟವಾಗಿದೆ.

○

ತಿರುವಳ್ಳುವರ್

ತಮಿಳಿನ ಪ್ರಖ್ಯಾತ ಕಾವ್ಯವಾದ ತಿರುಕ್ಕುರುಳ್, ತಿರುನಳ್ಳುವರ್ ಬರೆದ ತಮಿಳಿನ ಮೇರುಕೃತಿ.

ಏಳು ಗಣಗಳ ವೆಂಬಾ ಛಂದಸ್ಸಿನಲ್ಲಿ ರಚಿತವಾಗಿರುವ ತಿರುಕ್ಕುರುಳ್ ಕಾವ್ಯದಲ್ಲಿ ಒಟ್ಟು 1330 ದ್ವಿಪದಿ ವಚನಗಳಿವೆ. ಧರ್ಮ (ಅರಮ್) ಅರ್ಥ (ಪೊರುಳ್) ಕಾಮ (ಇನ್ಬಮ್) ಎಂಬ ಮೂರು ಪ್ರಮುಖ ವಿಭಾಗಗಳಿವೆ. ಮೇಲುನೋಟಕ್ಕೆ ನಾಲ್ಕು ಪುರುಷಾರ್ಥಗಳಲ್ಲಿ ಮೂರನ್ನು ಮಾತ್ರ ಎತ್ತಿಕೊಂಡಿರುವಂತೆ ಕಂಡುಬಂದರೂ ನಾಲ್ಕನೆಯ ಮೌಲ್ಯವಾದ ಮೋಕ್ಷ ಅಥವಾ ವೀಡುವಿನ ಪರೋಕ್ಷ ಪ್ರತಿಪಾದನೆ ಉದ್ದಕ್ಕೂ ಸ್ಪಷ್ಟ ಗೋಚರ. ಧರ್ಮಶಾಸ್ತ್ರಗಳಿಗೆ ಅನುಸಾರವಾಗಿ ಸ್ತಾಗಿದುವ ತಿರುಕ್ಕುರುಳ್ ದೇವತಾ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ.

ಇಂಗ್ಲಿಷ್, ಫ್ರೆಂಚ್, ಜರ್ಮನ್, ಲಾಟಿನ್‌ದಂತಹ ಯೂರೋಪಿನ ಬಹುಶೇಕ ಭಾಷೆಗಳಲ್ಲಲ್ಲದೆ, ಭಾರತದ ಬಹುಪಾಲು ಭಾಷೆಗಳಿಗೆ ಅನುವಾದವಾಗಿರುವ ಕುರುಳ್ (ತಿರುಕ್ಕುರಳ್‌ನ ಸಂಕ್ಷಿಪ್ತ ರೂಪ) ಪ್ಲೇಟೋವಿನ "ರಿಪಬ್ಲಿಕ್" ಮತ್ತು ಹ್ಯಾರಿಂಗ್ಟನ್ 'ಓಷಿಯಾನ'ಗಳನ್ನು ಮೀರಿಸುವಂತಹ, ವಿಶ್ವಪ್ರಜೆಯ ಮೂಡಣ ರಾಜ್ಯ ಪ್ರಭುತ್ವವನ್ನು ಚಿತ್ರಿಸುತ್ತದೆ.

ಭಾರತೀಯ ವಿಚಾರ ಪ್ರಣಾಲಿಯ, ಜೀವನ ರೀತಿಯ ಸಾರಸರ್ವಸ್ವ ಈ ಮಹಾಕೃತಿ ತಿರುಕ್ಕುರಳ್.

ಕುರುಳ್‌ನಲ್ಲಿ ವಿಧಿಗೆ ಸಂಬಂಧಿಸಿದಂತೆ ಬಂದಿರುವ ಅಧ್ಯಾಯ, ದೇಶದ ಇತರ ಭಾಗಗಳಲ್ಲಿನ ಭಾವನೆಗಳನ್ನೇ ವ್ಯಕ್ತಪಡಿಸುತ್ತದೆ. ಕರ್ಮದ ಸರ್ವಶಕ್ತತೆ ಮತ್ತು ಮತ್ತು ದೇವನ ಆಟಗಳನ್ನು ಕವಿ ಬೋಧಿಸಿದ್ದಾನೆ. ಅಲ್ಲದೆ ಭೂಲೋಕದಲ್ಲಿನ ಈ ಯಾತ್ರೆಯಲ್ಲಿ ಉಚ್ಚ-ನೀಚ ಮಾರ್ಗಗಳನ್ನು ಆಯ್ದುಕೊಳ್ಳುವುದರಲ್ಲಿನ ವ್ಯಕ್ತಿಗತ ಜವಾಬ್ದಾರಿಗಳನ್ನು ಒತ್ತಿಹೇಳುತ್ತಾ ತನ್ನ ವಚನದಲ್ಲಿ :

ವಿಧಿ ನಮ್ಮ ಎಸಕಗಳ ವಿಫಲಗೊಳಿಸುತಲಿರಲು
ಸತತ ಯತ್ನವೆ ಶುಭದ ಫಲವ ನೀಡುವುದು 619

ತಟ್ಟನದನ್ನಲ್ಲಿ ಬಿಡದೆ ಹೋರಾಟ ನಡೆಸುವನು
ವಿಧಿಯ ಹಿಂಮೆಟ್ಟಿ ತಾ ಮುಂದೆ ಸಾಗುವನು 620

ಎಂದು ಹೇಳಿ, ಮಾನವನೇ ತನ್ನ ಭವಿಷ್ಯದ ಶಿಲ್ಪಿ, ಅದೃಷ್ಟದ ಗುರು, ಎಂದು ಸಾರಿ ಹೇಳಿದ್ದಾನೆ. [ಲೇಖಕ]

SHAKTI
SUDHA

A Superb Tonic

ಅಶೋಕ ಪಿಜಿನ್‌ಸೀನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳನ್ನು ಸಿಗುವ ಏಕೈಕ ಸ್ಥಳ

Edited, Printed & Published by Dharmaprachara Niratа
M S Krishna Rao (Proprietor) at the Satyavad Press
Chamarajapuram, Mysoe 4

ಪುಡ್‌ಲ್ಯಾಂಡ್ಸ್ 7-2-69 ರಿಂದ

.... ಮನಮೋಹಕ ಹಿಂದಿ ಚಿತ್ರ ....

ದಿವಾನ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯರಾಣಿ ಸೈರಾಬಾನು ಅಭಿನಯಿಸಿರುವ
ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ— ಶಂಕರ್ ಜೈಕಿಶನ್ ಡೈರಕ್ಷನ್— ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಪೂರ್ಣಿಮಾ— ಜನಪ್ರಿಯ 3 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore-4.